# ಉಪ ತಹಶೀಲ್ದಾರರು, ನಾಡ ಕಾರ್ಯಲಯ, ಇಟ್ಟಿಗಿ ರವರ ನ್ಯಾಯಾಲಯ

| ಅರ್ಜಿದಾರರು | ತಕರಾರುದಾರರು |
|---|---|
| 1)ಉಮ್ಲಿಬಾಯಿ ಗಂಡ ಎಲ್.ಹನುಮನಾಯ್ಕ,<br>2)ಲಂ.ಚಂದ್ರನಾಯ್ಕ ತಂದೆ ಲೇಟ್ ಹನಮನಾಯ್ಕ,<br>ಅಡವಿಮಲ್ಲನಕೇರಿ ಗ್ರಾಮ, ಹಡಗಲಿ ತಾ. | ಕೊಟ್ರೇಶ ನಾಯ್ಕ ತಂದೆ ಹನುಮನಾಯ್ಕ,<br>ಅಡವಿಮಲ್ಲನಕೇರಿ ಗ್ರಾಮ, ಹಡಗಲಿ ತಾ. |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ಗ್ರಾಮದ ಹೆಸರು | ಸರ್ವೆ ನಂಬರ್ | ವಿಸ್ತೀರ್ಣ | ತರಹೆ |
|---|---|---|---|---|
| 1. | ಅಡವಿಮಲ್ಲನಕೇರಿ | 169/ಬಿ | 2–85 | ಖುಷ್ಕಿ |

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿ ತಾಲೂಕಿನ ಅಡವಿಮಲ್ಲನಕೇರಿ ಗ್ರಾಮದ ಸ.ನಂ.169/ಬಿ ವಿ:2–85 ಎಕರೆ ಜಮೀನಿಗೆ ಸಂಬಂಧಿಸಿದಂತೆ, ಅಡವಿಮಲ್ಲನಕೇರಿ ತಾಂಡ ನಿವಾಸಿಯಾದ ಉಮ್ಲಿಬಾಯಿ ಗಂಡ ಲೇಟ್ ಹನುಮನಾಯ್ಕ ಇವರು ಅಡವಿಮಲ್ಲನಕೇರಿ ತಾಂಡ ನಿವಾಸಿಯಾದ ಲಂಬಾಣಿ ಚಂದ್ರನಾಯ್ಕ ತಂದೆ ಲೇಟ್ ಹನುಮನಾಯ್ಕ ಇವರಿಗೆ ನೋಂದಾಯಿತ ಸ್ಥಿರಾಸ್ತಿ ದಾನಪತ್ರ ದಸ್ತಾವೇಜು ನಂ.4040/2015–16 ದಿ:29–01–2016 ರ ದಾನ ನೀಡಿರುತ್ತಾರೆ ಎಂದು ಉಪ ನೋಂದಣಾಧಿಕಾರಿ, ಹೂವಿನಹಡಗಲಿ ರವರು ವರದಿ ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ 21 ರ ನೋಟಿಸನ್ನು ದಿನಾಂಕ 30–01–2016 ರಂದು ಜಾರಿ ಮಾಡಲಾಗಿ, ನಿಗದಿತ ಅವದಿಯೊಳಗೆ ಅಂದರೆ ದಿ:16–02–2016 ರಂದು ಅಡವಿಮಲ್ಲನಕೇರಿ ತಾಂಡ ನಿವಾಸಿಯಾದ ಕೊಟ್ರೇಶನಾಯ್ಕ ತಂದೆ ಲೇಟ್ ಹನುಮನಾಯ್ಕ ರವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು, ಇಟ್ಟಿಗಿ ರವರು ಸದರಿ M.NO.17/2015-16 ರ ಕಡತವನ್ನು ವಿವಾದಿತ ಪ್ರಕರಣ ಎಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ವಿಚಾರಣೆಗೆ ದಿನಾಂಕ 06–04–2016 ರಂದು ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮತ್ತು ತಕರಾರುದಾರು ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ಉಭಯರು ಹಾಜರಾಗಿ ಸದರಿ ಪ್ರಕರಣಕ್ಕೆ ಸಂಬಂಧಿಸಿದ ಸ್ಥಿರಾಸ್ತಿಯ ದಾನಪತ್ರ ರದ್ದು ದಸ್ತಾವೇಜು ನಂ.4489/2015–16 ದಿ:29–02–2016 ಪ್ರತಿಯನ್ನು ಸಲ್ಲಿಸುತ್ತಾ, ತಾವು ಮತ್ತೊಮ್ಮೆ ಹೊಸದಾಗಿ ಪಾಲು ವಿಭಾಗ ಪ್ರಕಾರ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸುವುದಾಗಿ ತಿಳಿಸಿದರು. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ನಾ.ಕಾ.ಇ/ಪಹಣಿ/ವಿವಾದ/19/2015–16 ದಿನಾಂಕ:06–04–2016

**ಆದೇಶ**

ಪೀಟೀಕೆಯಲ್ಲಿ ವಿವರಿಸಿದ ವಾಸ್ತವಾಂಶ ಮತ್ತು ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129ರ ಪ್ರಕಾರ M. M.NO.17/2015-16 ರ ಪ್ರಕರಣದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶಿಸಿದೆ.

ಉಪ–ತಹಶೀಲ್ದಾರರು
ನಾಡ ಕಾರ್ಯಾಲಯ,
ಇಟ್ಟಿಗಿ.

ಪ್ರತಿಯನ್ನು,

1. ಅರ್ಜಿದಾರರು ಮತ್ತು ತಕರಾರುದಾರು ಇವರಿಗೆ
2. ಭೂಮಿ ಕೇಂದ್ರ, ತಾಲೂಕು ಕಾರ್ಯಾಲಯ, ಹೂವಿನಹಡಗಲಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3. ಶುದ್ಧಪ್ರತಿ ಕಡತಕ್ಕೆ.